**ಬದುಕಿನ ಕಷ್ಟಗಳ ಕಗ್ಗತ್ತಲನ್ನು ಭೇದಿಸಿಕೊಂಡು ಮೇಲೆ ಬಂದಿರುವವರು ಕಿರಣ್‌ರಾಜ್ ಕೆ. ಅವರ ನಿರ್ದೇಶನದ ಮೊದಲ ಸಿನಿಮಾ '777 ಚಾರ್ಲಿ' ಇನ್ನೇನು ಬಿಡುಗಡೆಯ ಹೊಸ್ತಿಲಲ್ಲಿದೆ. ಈ ಹಿನ್ನೆಲೆಯಲ್ಲಿ ಅವರು ತಮ್ಮ ಹಿನ್ನೆಲೆಯನ್ನೂ ಇಲ್ಲಿ ನೆನಪಿಸಿಕೊಂಡಿದ್ದಾರೆ.**



■ ಪದ್ಮನಾಭ ಭಟ್

# ಭರವಸೆಯ ಸಿನಿಕಿರಣ

ಕಿರಣ್‌ರಾಜ್ ಎಂಬ ಈ ತರುಣ ಹುಟ್ಟಿ ಬೆಳೆದಿದ್ದೆಲ್ಲ ಕಾಸರಗೋಡಿನ ಬದಿಯಡ್ಕ ಎಂಬ ಊರಿನ ಮಲ್ಲಮೂಲೆ ಎಂಬ ಜಾಗದಲ್ಲಿ. ಚಿಕ್ಕಂದಿನಿಂದಲೂ ಶಿಕ್ಷಣ – ಕಲೆ ಎರಡರಲ್ಲಿಯೂ ಸಾಕಷ್ಟು ಆಸಕ್ತಿ ಹೊಂದಿದ್ದರು. ಆದರೆ ಆ ಎರಡೂ ದಾರಿಗಳಲ್ಲಿಯೂ ತುಂಬ ಮುಂದಕ್ಕೆ ಹೋಗಲಾಗದ ಹಾಗೆ ಮನೆಯ ಆರ್ಥಿಕ ಪರಿಸ್ಥಿತಿ ಅಡ್ಡಗಾಲು ಹಾಕಿತ್ತು. ಅನಾರೋಗ್ಯದಿಂದ ಬಳಲುತ್ತಿರುವ ತಂದೆ. ತಮ್ಮ, ತಂಗಿಯ ಶಿಕ್ಷಣ, ಮನೆಯ ದೇಖರೇಖೆಯ ಜವಾಬ್ದಾರಿಯ ನೊಗವನ್ನು ಹೆಗಲಿಗೆ ಹೊತ್ತುಕೊಂಡು ಕಿರಣ್ ಹತ್ತನೇ ತರಗತಿ ಮುಗಿದ ಮೇಲೆ ಶಿಕ್ಷಣಕ್ಕೆ ತಿಲಾಂಜಲಿ ಇಟ್ಟು ಮಂಗಳೂರಿನ ಗ್ರೀನ್ ಪಾರ್ಕ್ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ವೇಟರ್ ಆಗಿ ಕೆಲಸಕ್ಕೆ ಸೇರಿಕೊಂಡರು. ಅಲ್ಲಿಂದ ಮುಂದೆ ಐದು ವರ್ಷಗಳ ಕಾಲ ಸೇಲ್ಸ್‌ಮನ್ ಆಗಿ, ಸೆಕ್ಯೂರಿಟಿ ಗಾರ್ಡ್ ಆಗಿಯೂ ಕೆಲಸ ಮಾಡಿದ ಅವರಿಗೆ ಬದುಕಿನಲ್ಲಿ ಭರವಸೆಯ ದೀಪವಾಗಿ ಉರಿಯುತ್ತಿದ್ದದ್ದು ನಟನೆಯ ಹಂಬಲ.



ಕಿರಣ್‌ರಾಜ್ ಕೆ.

ಬಾಲ್ಯದಿಂದಲೇ ನಾಟಕಗಳನ್ನು ಬರೆದು, ನಿರ್ದೇಶಿಸಿ ನಟಿಸಿ ಸ್ಪರ್ಧೆಗಳಲ್ಲಿ ಭಾಗವಹಿಸಿ ಗೆಲ್ಲುತ್ತಿದ್ದ ಕಿರಣ್‌ಗೆ ಹೇಗಾದರೂ ಬೆಂಗಳೂರಿಗೆ ಹೋಗಿ ಚಿತ್ರರಂಗ ಸೇರಿಕೊಂಡು ನಟನಾಗಿ ಬೆಳೆಯಬೇಕು ಎಂಬ ಮಹದಾಸೆ. ಮನೆಯ ಪರಿಸ್ಥಿತಿ ಕೊಂಚ ಸುಧಾರಿಸಿದ್ದೇ ಅವರು ತಡಮಾಡದೆ ರಾಜಧಾನಿಯ ಕಡೆಗೆ ಹೋಗುವ ಬಸ್ಸು ಹತ್ತಿಯೇ ಬಿಟ್ಟರು.

ಬೆಂಗಳೂರಿಗೆ ಬಂದ ಅವರು ಮೊದಲು ಸೇರಿಕೊಂಡಿದ್ದು ಗುರು ದೇಶಪಾಂಡೆ ಅವರ ಸಿನಿಮಾ ಇನ್‌ಸ್ಟಿಟ್ಯೂಟ್. ಅಲ್ಲಿ ನಟನೆಯ ಕೋರ್ಸ್ ಮಾಡಿದ ಅವರು ನಿರ್ದೇಶನದ ಪ್ರಥಮ ಪಾಠಗಳನ್ನೂ ಕಲಿತರು. ನಿರ್ದೇಶಕ ಜಯತೀರ್ಥ ಅಲ್ಲಿ ಅವರಿಗೆ ಗುರುವಾಗಿದ್ದರು.

ಕೋರ್ಸ್ ಮುಗಿದ ಮೇಲೆ ಚಿತ್ರರಂಗವೆಂಬ ಏಳುಸುತ್ತಿನ ಕೋಟೆಯೊಳಗೆ ಹೊಗುವ ದಾರಿಯ ಹುಡುಕಾಟದಲ್ಲಿ ಅವರು ಹಲವು ಸಿನಿಮಾಗಳಲ್ಲಿ ಜ್ಯೂನಿಯರ್ ಆರ್ಟಿಸ್ಟ್ ಆಗಿಯೂ ಕೆಲಸ ಮಾಡಿದರು. 'ಜಾಕಿ', 'ಪುತ್ರ', 'ಕಂಠೀರವ' ಸಿನಿಮಾಗಳಲ್ಲೆಲ್ಲ ಕಿರಣ್ ಅವರ ಚಹರೆ ಹೀಗೆ ಬಂದು ಹಾಗೆ ಹೋಗಿದ್ದಿದೆ.

ಜ್ಯೂನಿಯರ್ ಆರ್ಟಿಸ್ಟ್ ಆಗಿ ಕೆಲಸ ಮಾಡುವುದರಿಂದ ನಟನಾಗುವ ಅವಕಾಶ ಸಿಗುವುದು ಕಷ್ಟ ಎಂದು ಗೊತ್ತಾಗುತ್ತಿದ್ದ ಹಾಗೆ ಅವರು ಬೇರೆ ದಾರಿ ಹುಡುಕತೊಡಗಿದರು. ಅಷ್ಟರಲ್ಲಿ ನಿರ್ದೇಶನದ ಕಡೆಗೂ ಅವರ ಒಲವು ಬೆಳೆಯುತ್ತಿತ್ತು. 'ಕಾವಳ' ಎಂಬ ಒಂದು ಟೆಲಿಫಿಲ್ಮ್ ಕಥೆಯನ್ನೂ ಸಿದ್ಧ ಮಾಡಿಕೊಂಡಿದ್ದರು. 2010ರಲ್ಲಿ ಮತ್ತೆ ಊರಿಗೆ ಮರಳಿ ಅಲ್ಲಿ ನಾಟಕ ತಂಡದ ಗೆಳೆಯರನ್ನೆಲ್ಲ ಕಲೆಹಾಕಿ, ಅವರಿವರ ಬಳಿ ಸಾಲ ಮಾಡಿ ಹಣ ಹೊಂದಿಸಿ 'ಕಾವಳ' ಟೆಲಿಫಿಲ್ಮ್ ಮಾಡಿಯೇ ಬಿಟ್ಟರು. ಅದು ಕಾಸರಗೋಡಿನಲ್ಲಿ ಹಲವು ಕಡೆಗಳಲ್ಲಿ ಪ್ರದರ್ಶನ ಕಂಡು ಒಳ್ಳೆಯ ಸ್ಪಂದನವೂ ಸಿಕ್ಕಿತು. ನಂತರ 'ಕಬ್ಬಿನ ಹಾಲು' ಎಂಬ ಕಿರುಚಿತ್ರವನ್ನೂ ಮಾಡಿದರು. ಅದು ಬೆಂಗಳೂರಿನ ಒಂದು ಕಿರುಚಿತ್ರ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದುಕೊಂಡಿತು. ಆ ಸ್ಪರ್ಧೆಯ ಮೂವರು ನಿರ್ಣಾಯಕರಲ್ಲಿ ಜಯತೀರ್ಥ ಕೂಡ ಒಬ್ಬರಾಗಿದ್ದರು. ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ತನ್ನ ವಿದ್ಯಾರ್ಥಿಯಾಗಿದ್ದ ಕಿರಣ್ ಅವರು ರೂಪಿಸಿದ ಕಿರುಚಿತ್ರವನ್ನು ನೋಡಿ ಅವರಿಗೆ ಮೆಚ್ಚುಗೆ ಮೂಡಿತು. ತಮ್ಮ ಜೊತೆಗೆ ಕೆಲಸ ಮಾಡುವಂತೆ ಕರೆದರು. ಆಗ ಅವರು ಇಮ್ರಾನ್ ಸರ್ದಾರಿಯಾ ಅವರ 'ಎಂದೆಂದಿಗೂ' ಸಿನಿಮಾಕ್ಕೆ ಚಿತ್ರಕಥೆ ಬರೆಯುತ್ತಿದ್ದರು. ಅವರ ಜೊತೆಗೆ ಹೋದ ಕಿರಣ್, ಸಿನಿಮಾದ ನಿರ್ದೇಶನ ತಂಡದಲ್ಲಿಯೂ ಸಕ್ರಿಯವಾಗಿ ತೊಡಗಿಸಿಕೊಂಡರು. ಅದನ್ನು ಗಮನಿಸಿದ ಇಮ್ರಾನ್ ಆ ಸಿನಿಮಾದ ಸಹಾಯಕ ನಿರ್ದೇಶಕನಾಗಿ ಇವರನ್ನು ಸೇರಿಸಿಕೊಂಡರು.

'ಎಂದೆಂದಿಗೂ' ಕಿರಣ್, ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ ಮೊದಲ ಸಿನಿಮಾ. ಎಸ್.ವಿ. ಬಾಬು ಆ ಸಿನಿಮಾದ ನಿರ್ಮಾಪಕರು. ಅವರ ಕಚೇರಿಯಲ್ಲಿದ್ದಾಗಲೇ ಕಿರಣ್‌ಗೆ ರಿಷಭ್ ಶೆಟ್ಟಿ ಪರಿಚಯವಾಗಿದ್ದು. ಆಗ ರಿಷಭ್ 'ರಿಕ್ಕಿ' ಸಿನಿಮಾ ಮಾಡಲು ಸಿದ್ಧರಾಗುತ್ತಿದ್ದರು. ಕಿರಣ್ ಅವರನ್ನು ತಮ್ಮ ಸಿನಿಮಾಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಲು ಕರೆದರು. ಆಗಲೇ 'ಉಳಿದವರು ಕಂಡಂತೆ' ಸಿನಿಮಾ ನೋಡಿ ಫಿದಾ ಆಗಿದ್ದ ಅವರಿಗೆ ಅದೇ ತಂಡದ ಜೊತೆಗೆ ಕೆಲಸ ಮಾಡಲು ಸಿಕ್ಕಿದ್ದು ಅದೃಷ್ಟದ ಬಾಗಿಲು